
ಇಡೀ ಊರನ್ನು ಸಲಹುವ ತಂದೆಯ ಮನಃಸ್ಥಿತಿ.

ಕಾಸೀಮ ಮತ್ತು ಫಾತಿಮಾರಷ್ಟೇ ಬುಡಣಸಾಬರ ಮೊಮ್ಮಕ್ಕಳಲ್ಲ, ಇಡೀ ಊರಿನ ಆ ವಯದ ಮಕ್ಕಳು ಇವರ ಮಡಿಲಲ್ಲಿ ಆಡಿ ಬೆಳೆದವರಂತೆಯೇ ಕಳಕಳಿ ತೋರುವುದನ್ನು ಕಂಡಾಗ, ಅವರೆಲ್ಲರ ಬಾಲ್ಯದ ಮೇಲೆ ಬುಡಣಸಾಬರು ಬೀರಿದ ಪ್ರಭಾವವನ್ನು ನಾವಿಲ್ಲಿ ಗಮನಿಸಬಹುದು, ಹಾಗಾಗಿ, ಊರಿನ ಸಮುದಾಯವೆಲ್ಲ ಅವರ ಒಡಹುಟ್ಟಿನಂತೆ ಇದ್ದವರೇ. ಆ ಕಾರಣಕ್ಕಾಗಿಯೇ 'ಕತ್ತಲಾದೊಡನೆ ಹನೇಹಳ್ಳಿಯ ಎಲ್ಲರ ಮನೆಗಳಲ್ಲೂ ದೀಪ ಬೆಳಗಲಿ' ಎಂದು ಅವರ ಮನಸ್ಸು ಹಂಬಲಿಸುತ್ತದೆ. ಓಣಿಯಲ್ಲಿಯ ಕತ್ತಲೆ ಒಮ್ಮೆಲೇ ದಟ್ಟವಾಗಿ ಎಲ್ಲವೂ ನಿಶ್ಶಬ್ದವಾದಂತೆ ಭಾಸವಾಗುತ್ತ ಬುಡಣಸಾಬರ ಮೈ ಶಿರ್ ಎಂದು ತಾವೇ ದಿಗಿಲುಪಟ್ಟುಕೊಳ್ಳುತ್ತಿರುವಾಗಲೇ, ಮುಂದೆ ಮನವೇಲನ ಮನೆಯ ಕಂದೀಲಿನ ಬೆಳಕನ್ನು ನೋಡಿ ಅಷ್ಟರಲ್ಲೇ ಸಮಾಧಾನ ಪಟ್ಟುಕೊಳ್ಳುತ್ತಾರೆ. ಎಲ್ಲರ ಮನೆಯೂ ಬೆಳಕಿನಿಂದ ಬೆಳಗುತ್ತಿರಬೇಕೆಂಬ ಉದಾತ್ತ ಇಚ್ಛೆ ಹೊತ್ತ ಜೀವ ಅದು, ಹಾಗಾಗಿ ಯಾರ್‍ಯಾರದೋ ಹಿತ್ತಲು, ದಣಪೆ, ಅಂಗಡಿಕಟ್ಟೆ, ಮುರ್ಕಿ ಹಾಯ್ದು ಸಾಗುತ್ತಲೇ ಚಾಳೀಸಿಲ್ಲದ ಅವರ ಮುದಿ ಕಣ್ಣುಗಳು ಎಲ್ಲರ ಮನೆಯ ದೀಪ ಹುಡುಕುತ್ತವೆ. ಯಾವ ಜೀವಕ್ಕೂ ಕೇಡಾಗಬಾರದು ಎಂದು ಬಗೆವ ಸಜ್ಜನ ಸಂತ ಬುಡಣಸಾಬರ ಈ ಸಕಾರಾತ್ಮಕ ಮನೋಭಾವವು ಜೀವನದ ಶ್ರೇಷ್ಠ ಮೌಲ್ಯವನ್ನು ಹಿಡಿದಿಟ್ಟಿದೆ.

ಕೇವಲ ಒಂಬತ್ತು ಪುಟಗಳ ಯಶವಂತ ಚಿತ್ತಾಲರ 'ಆಟ' ಕತೆಯಲ್ಲಿ ಮಾತ್ರವಲ್ಲ, ಇಡೀ ಹನೇಹಳ್ಳಿಯ ಪರಿಸರದಲ್ಲಿ ಸ್ಪಂದನಶೀಲ ಮನಸ್ಸಿನ ಬುಡಣಸಾಬರು ಹಾಸುಹೊಕ್ಕಾಗಿದ್ದಾರೆ. ಸೋಜಿಗದ ಸಂಗತಿಯೆಂದರೆ, ನಡೆಯುತ್ತ ಸಾಗಿದರೆ ವಾಸ್ತವದಲ್ಲಿ ಒಂದು ಮೈಲಿಯೂ ಇಲ್ಲದ ಹನೇಹಳ್ಳಿಯ ಆ ರಸ್ತೆಯು, ಚಿತ್ತಾಲರು ವರ್ಣಿಸುವಾಗ ಎಂಟ್ಹತ್ತು ಮೈಲಿಗಳಷ್ಟು ವಿಸ್ತಾರವಿದ್ದಂತೆ ಭಾಸವಾಗುತ್ತದೆ.

ಇಲಿ ಕಚ್ಚಿದ್ದೆಂದು ತಿಳಿದು ಹಾವು ಕಚ್ಚಿ ಸತ್ತುಹೋದ ನರಸಿಂಹನ ಸುದ್ದಿ ತಿಳಿದು ಸಂಕಟಪಟ್ಟು 'ಇದು ಆಗಬಾರದಿತ್ತು, ಎಲ್ಲ ಖುದಾನ ಮರ್ಜಿ' ಎಂದು ತಮ್ಮ ತಾವೇ ಸಂತೈಸಿಕೊಂಡರೂ, 'ಮೊದಲೇ ಎಲ್ಲ ಗೊತ್ತಿದ್ದೂ ನರಸಿಂಹ ಗೆಳೆಯರನ್ನು ಆಟಕ್ಕೆ ಕರೆದಿದ್ದನೊ ಏನೊ' ಎಂಬ ಅಲೌಕಿಕ ಭಾವ ಮೆರೆಯುವ ಬುಡಣಸಾಬರು ಶಿಶುನಾಳ ಶರೀಫರ ತಾತ್ವಿಕತೆಯನ್ನು ಅಳವಡಿಸಿಕೊಂಡವರಂತೆ ಕಾಣುತ್ತಾರೆ.

ಕಾಳಜಿ, ಗಮನ, ವಾತ್ಸಲ್ಯ, ಪ್ರೀತಿ ಮತ್ತು ಸಹಾನುಭೂತಿ ಇವುಗಳು ಮನುಷ್ಯನ



ಅಂತರಂಗದಲ್ಲಿ ಸಾತ್ವಿಕತೆಯ ಜ್ಯೋತಿಯನ್ನು ಜಾಗೃತಗೊಳಿಸುವಂಥವು, ಮತ್ತಿವು ಪರಸ್ಪರ ಕೊಟ್ಟುಕೊಳ್ಳಬೇಕಾದ ಅಮೂಲ್ಯ ಉಡುಗೊರೆಗಳು ಕೂಡ. ಒಂದು ಜೀವವನ್ನು ಇನ್ನೊಂದು ಜೀವಕ್ಕೆ ಅನುಭಾವದ ನೆಲೆಯಲ್ಲಿ ಹತ್ತಿರವಾಗಿಸುವುದು ಅವರ ನಡುವಿನ ಆಪ್ತ ಬಂಧವೇ ಹೊರತು ಅವರ ವೈಯಕ್ತಿಕ ಧಾರ್ಮಿಕತೆಯಲ್ಲ. ಸರ್ವ ಭ್ರಾತೃತ್ವ ಮೆರೆವ ಹನೇಹಳ್ಳಿಯ ಜನಸಮುದಾಯ ಮತ್ತು ಬುಡಣಸಾಬರ ಸೌಹಾರ್ದತೆಯು ಇಂದಿನ ದುರಿತ ಕಾಲದಲ್ಲಿ ನಮಗೆ ಬಹಳ ಮುಖ್ಯವೆನಿಸುತ್ತದೆ.

●